## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ

## ಸಿ.ಸಿ ನಂ.709/2020

ಸಾಕ್ಷಿದಾರರ ಹೆಸರು : ಬಸವರಾಜ ಪಿ.ಡಬ್ಲ್ಯೂ: 06

ತಂದೆಯ ಹೆಸರು : ಕೊಲ್ಲೂರಪ್ಪ ಸಿ.ಡಬ್ಲ್ಯೂ: 10

ವಯಸ್ಸು : ಸು. 48 ವರ್ಷ

ಉದ್ಯೋಗ : ಶಿಕ್ಷಕರು

ವಾಸ : ವಿಟ್ಟಲ ನಗರ, ಚಳ್ಳಕೆರೆ

ದಿನಾಂಕ 02.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುವುದಿಲ್ಲ. ನನಗೆ ಪಿರ್ಯಾದಿ ಸುನೀಲ್ ರವರ ಪರಿಚಯ ಇರುವುದಿಲ್ಲ. ಮೃತ ಮೈಲಾರಿ ಅವರ ಪರಿಚಯ ನನಗೆ ಇದೆ. ನನಗೆ ಚಾಸಾ 9 ಮಹಾಂತೇಶ್ ಮತ್ತು ಚಾಸಾ 11 ಹನುಮಂತರೆಡ್ಡಿ ರವರ ಪರಿಚಯ ನನಗೆ ಇರುವುದಿಲ್ಲ. ದಿನಾಂಕಃ 23.05.2018 ರಂದು ಪೋಲಿಸರು ನನಗೆ ನನ್ನ ಅಕ್ಕನ ಮಗನಾದ ಮೈಲಾರಿ ಮೃತ ಪಟ್ಟಿದ್ದಾನೆ ಎಂದು ಹೇಳಿ ಚಳ್ಳಕೆರೆಯ ಎಸ್ ಜೆ ಎಂ ಕಾಲೇಜಿನ ಹತ್ತಿರ ಕರೆದು ಕೊಂಡು ಹೋಗಿದ್ದರು. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಮೈಲಾರಿ ಮೃತಪಟ್ಟಿದ್ದನು. ಸ್ಥಳದಲ್ಲಿ ಒಂದು ಕೆ ಎಸ್ ಆರ್ ಟಿ ಸಿ ಬಸ್ ಮತ್ತು ಒಂದು ಬೈಕ್ ಇತ್ತು. ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸದರಿ ಬಸ್ ಮತ್ತು ಬೈಕ್ ನ ನೋಂದಣಿ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ಇದ್ದ ಬೈಕ್ ಮತ್ತು ಬಸ್ಸನ್ನು ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಮಾನ್ಯ ಸ.ಸ. ಅವರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಪರವಾನಿಗೆಯನ್ನು ಕೋರಿದ್ದು, ಪರವಾನಿಗೆಯನ್ನು ನೀಡಲಾಯಿತು).**

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಪಘಾತ ನಾನು ಹೇಳಿದ ದಿನಾಂಕ ಮತ್ತು ಸಮಯದಲ್ಲಿ ಬೆಳಗಿನ ಜಾವ 3-20 ಕ್ಕೆ ಸಂಭವಿಸಿದೆ ಎಂದರೆ ಸರಿ. ಬಸ್ಸಿನ ನೋಂದಣಿ ಸಂಖ್ಯೆ ಕೆಎ 34 ಎಫ್ 1148 ಆಗಿತ್ತು ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿ ಸದರಿ ಬಸ್ ನ ಚಾಲಕನಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ಮೃತ ಮೈಲಾರಿ, ಸುನೀಲ್ ಚಲಾಯಿಸುತ್ತಿದ್ದ ಕೆಎ 16 ಇಜೆ 7090 ಮೋಟಾರ್ ಸೈಕಲ್ ನಲ್ಲಿ ಪ್ರಯಾಣಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಅಪಘಾತವನ್ನು ನಾನು ಕಣ್ಣಾರೇ ಕಂಡಿದ್ದೇ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲಿಸರಿಗೆ ನನ್ನ ಹೇಳಿಕೆಯನ್ನು ಕೂಡ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-24 ಎಂದು ಗುರುತಿಸಲಾಯಿತು. ಅಪಘಾತವಾದ ವಿಚಾರವನ್ನು ಪಿರ್ಯಾದಿ ಸುನೀಲ್ ಕರೆ ಮಾಡಿ ತಿಳಿಸಿದ್ದನು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ**

ಏನು ಇಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ